# ಕಲ್ಪಸೂತ್ರ

ಸಂಸ್ಕೃತಿ–ಸಂಸ್ಕಾರ ಎಂಬ ಶಬ್ದಗಳನ್ನು ನಾವು ಬಹಳವಾಗಿ ಬಳಸುತ್ತಿದ್ದೇವೆ. ಅವುಗಳ ಮೂಲ ಆಶಯ ಒಂದೇ ಆಗಿದೆ. ಆದರೆ, ಸಂಸ್ಕೃತಿ ಎಂಬುದಕ್ಕೆ ಸಮಷ್ಟಿ ಆಶಯವೂ ಸಂಸ್ಕಾರ ಎಂಬುದಕ್ಕೆ ವ್ಯಷ್ಟಿ ಆಶಯವೂ ತೋರಿಬರುತ್ತದೆ. ಧರ್ಮಶಾಸ್ತ್ರವನ್ನು ಬರೆದ ಆಚಾರ್ಯರು ಅನೇಕ ಬಗೆಯ ಸಂಸ್ಕಾರಗಳನ್ನು ಹೀಗೇ ಮಾಡಬೇಕೆಂದು ವಿಧಿಸಿದ್ದಾರೆ. ಇವುಗಳ ವಿಕಾಸವನ್ನು ಕಾಲಾನುಕಾಲಕ್ಕೆ ನಾವು ಕಾಣಬಹುದು. ಸಂಸ್ಕಾರದ ವಿಷಯದಲ್ಲಿ ಧರ್ಮಶಾಸ್ತ್ರವು ಬದಲಾವಣೆಗೂ ತಲೆಬಾಗಿದೆ. ಈ ವಿಚಾರವನ್ನು ಚಾರಿತ್ರಿಕವಾಗಿ ಗಮನಿಸಿದರೆ ವೇದಸಂಹಿತೆಗಳಲ್ಲಿ, ಬ್ರಾಹ್ಮಣ–ಆರಣ್ಯಕಗಳಲ್ಲಿ ಸರಳವಾಗಿ ಕಾಣಬರುವ ಕೆಲವೊಂದು ಮುಖ್ಯ ಸಂಸ್ಕಾರಗಳು ಸಂಖ್ಯಾದೃಷ್ಟಿಯಿಂದ ಮತ್ತು ಪ್ರಕ್ರಿಯಾ ದೃಷ್ಟಿಯಿಂದ ಹಿಗ್ಗುತ್ತಾ ಬಂದಿರುವುದನ್ನು ನಾವು ಕಾಣಬಹುದು.

ವೇದಾಂಗಗಳು ಆರು. ಅವುಗಳಲ್ಲಿ 'ಕಲ್ಪ'ವೂ ಒಂದು. ಇದು ಎಲ್ಲಾ ಬಗೆಯ ಸಂಸ್ಕಾರಗಳ ಕೈಪಿಡಿಯೆಂದು ಹೇಳಿದರೆ ತಪ್ಪಾಗಲಾರದು. ಈ ಕಲ್ಪಸೂತ್ರವು ಗೃಹ್ಯ, ಧರ್ಮ, ಶ್ರೌತ ಮತ್ತು ಶುಲ್ಬ ಎಂದು ನಾಕು ಬಗೆಯಲ್ಲಿ ವಿಭಕ್ತವಾಗಿ ಒಡಮೂಡಿದೆ. ಇವು ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ಸಂಸ್ಕಾರಗಳನ್ನು ಒಳಗೊಂಡಿವೆ. ಮೊದಲನೆಯದಾದ 'ಗೃಹ್ಯಸೂತ್ರ'ವು ಕುಟುಂಬವನ್ನೇ ಕೇಂದ್ರ ಮಾಡಿಕೊಂಡಿರುವ ಸಂಸ್ಕಾರಗಳ ವಿಧಿ–ವಿಧಾನಗಳನ್ನು ನಮಗೆ ತಿಳಿಸುತ್ತದೆ. ಗೋಭಿಲ ಮಹರ್ಷಿಯ 'ಗೃಹ್ಯಸೂತ್ರ' ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಕುಟುಂಬದ ಮೂಲಘಟಕ ವ್ಯಕ್ತಿಯಷ್ಟೆ. ಆ ಕಾರಣದಿಂದಾಗಿ ವೈಯಕ್ತಿಕ ಸಂಸ್ಕಾರಗಳು ಇಲ್ಲಿ ವಿಶದವಾಗಿ ಮೂಡಿಬಂದಿವೆ. ಇನ್ನು ಎರಡನೆಯದಾದ 'ಧರ್ಮಸೂತ್ರ'ವು ವ್ಯಕ್ತಿ, ಕುಟುಂಬ ಮತ್ತು ಸಮಾಜಗಳ ಸಂಪೂರ್ಣ ವಿವಿಧ ಸ್ತರಗಳನ್ನು ಒಳಗೊಳ್ಳುತ್ತದೆ. ಇದರ ಜತೆಗೆ ಆಳ್ವಿಕೆ–ರಾಜನೀತಿಗಳ ಅಂಶಗಳನ್ನು ಇದು ಚರ್ಚಿಸುತ್ತದೆ. ಈ ಕಾರಣದಿಂದಾಗಿ, ಚತುರ್ವರ್ಣಗಳ ಮತ್ತು ಆಶ್ರಮಗಳ ವಿವರ ಇಲ್ಲಿ ಕಂಡುಬರುವುದು ಸಹಜ.

ಇಲ್ಲಿ ವ್ಯಕ್ತಿ–ವ್ಯಕ್ತಿಗಳ ನಡುವಣ ಸಂಬಂಧ, ಬೇರೆಬೇರೆ ವರ್ಣಗಳ ಸಾಮರಸ್ಯ ಮತ್ತು ಎಲ್ಲ ವರ್ಣದವರ ಕರ್ತವ್ಯ, ಬಾಧ್ಯತೆಗಳನ್ನು ಧರ್ಮಸೂತ್ರವೂ ಒಳಗೊಂಡಿದೆ. ಇನ್ನು 'ಶ್ರೌತಸೂತ್ರ'ಗಳ ವಿಚಾರ. ಇದು ಮುಖ್ಯವಾಗಿ ವ್ಯಕ್ತಿ–ಕುಟುಂಬ–ಸಮಾಜಗಳ ಸ್ತರದಲ್ಲಿ ಭಗವತ್ ಕೇಂದ್ರಿತವಾಗಿ ಅನೇಕ ಬಗೆಯ ಆಚರಣೆಗಳನ್ನು ನಡೆಸುವ ವಿಚಾರಕ್ಕೆ ಸಂಬಂಧಿಸಿದೆ. ಇಲ್ಲಿ ನಡೆಯುವ ಆರಾಧನೆ ಮತ್ತು ಅನ್ಯೋನ್ಯವಾದ ಸ್ನೇಹ ವಿಧಾನಗಳನ್ನು ಶ್ರೌತಸೂತ್ರವು ವ್ಯಾಪಕವಾಗಿ ಚರ್ಚಿಸುತ್ತದೆ! ಯಜ್ಞದ ಮೂಲಕ ಸಮಾಜದ ಆರ್ಥಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನೆಲೆಗಳ ಸಮೃದ್ಧಿ ಹೇಗೆ ಸಾಧ್ಯ ಎಂಬುದನ್ನು ತಿಳಿಯಲು ಶ್ರೌತಸೂತ್ರಗಳ ತಿಳಿವಳಿಕೆ ನಮಗೆ ಬೇಕಾಗುತ್ತದೆ. ಇನ್ನು 'ಶುಲ್ಬಸೂತ್ರ' ಏನುಂಟೋ ಅದು ಶ್ರೌತಸೂತ್ರದ ಒಂದು ಅಂಗವೇ ಆಗಿದೆ.

ನಮ್ಮ ಸಾಹಿತ್ಯ ಕೃತಿಗಳಲ್ಲಿಯೂ ಗೃಹ್ಯ, ಧರ್ಮ ಮತ್ತು ಶ್ರೌತಸೂತ್ರದ ನೆಲೆ–ಬೆಲೆಗಳನ್ನು ಕಾಣಬಹುದು. ಸಂಸ್ಕೃತ ಸಾಹಿತ್ಯದ ಕಾಳಿದಾಸ–ಭಾರವಿ–ಭಾಸ–ಅಶ್ವಘೋಷರ ಕೃತಿಗಳಲ್ಲಿ ನಾವಿದನ್ನು ಕಾಣುತ್ತೇವೆ. ಕನ್ನಡದ ಪಂಪನ ಕೃತಿಗಳಲ್ಲಿಯೂ ಅವನ ನಂತರ ಬಂದ ಅನೇಕ ಕವಿಗಳ ಕೃತಿಗಳಲ್ಲಿಯೂ ಇದನ್ನು ನಾವು ಗಮನಿಸಬಹುದು. ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಶಂತನು ಮಹಾರಾಜನು 'ಸತ್ಯವತಿ'ಗೆ ನೀನು ಬಾ, ನಿನ್ನನ್ನು ಕರೆದುಕೊಂಡು ಹೋಗುತ್ತೇನೆ ಎಂದಾಗ 'ಬೇಡುವೊಡೆ ಎಮ್ಮಯ್ಯನಂ ಬೇಡಿರೇ' ಎನ್ನುತ್ತಾಳೆ. ಇದು ಗೃಹ್ಯಸೂತ್ರದ ನಡಾವಳಿ. ತಂದೆಯು ಗೃಹಕೃತ್ಯಗಳ ಒಡೆಯನಷ್ಟೆ. ಅವನ ಅಧೀನದಲ್ಲಿ ಸಂಸಾರ ಇರುತ್ತದೆ. ಸಂಸಾರದ ಆಗು–ಹೋಗುಗಳೆಲ್ಲ ತಂದೆಗೆ ಸೇರಿದ್ದು ತಾನೆ? ಈ ಅರಿವನ್ನು ಈ ಮಾತು ತಿಳಿಸುತ್ತದೆ.

ಮಹಾಭಾರತದಲ್ಲಿ ದ್ರೌಪದಿಯು ಐವರು ಗಂಡಂದಿರ ಹೆಂಡತಿಯಾಗಿ ಬರುತ್ತಾಳೆ! ಒಂದು ಹೆಣ್ಣು ಐವರ ಮಡದಿಯಾಗುವ 'ಧರ್ಮಸೂಕ್ಷ್ಮ' ಇಲ್ಲುಂಟು. ದ್ರೌಪದಿಯು ಐವರು ಗಂಡಂದಿರನ್ನು ಒಂದು ತೂಕದಲ್ಲಿ ಇಟ್ಟುಕೊಂಡು ಬೆಳೆಸಿದವಳು; ಬಳಸಿಕೊಂಡವಳು. ಪಾಂಡವರ ಏಳ್ಗೆಯಲ್ಲಿ ದ್ರೌಪದಿಯ ಪಾತ್ರ ಹಿರಿದಾದುದೇಸರಿ. ಸಾವಿತ್ರಿಯು ಯಮಧರ್ಮನನ್ನು ಮಾತಿನ ಮೂಲಕ ಸೋಲಿಸಿ, ಸತ್ಯವಾನನನ್ನು ಮರಳಿ ಸಾವಿನ ಮನೆಯಿಂದ ಕರೆತಂದದ್ದು ಪತಿಧರ್ಮದ ಸೂಕ್ಷ್ಮವಲ್ಲದೆ ಇನ್ನೇನು ಹೇಳಬೇಕು? ಮನೆ ಎನಿಸಿಕೊಳ್ಳುವುದು ಕೂಡುಕುಟುಂಬದ ಕಲ್ಪನೆಯಲ್ಲೇ. ಇಲ್ಲಿ ಅಪಸ್ವರಕ್ಕೆ ಅವಕಾಶ ಇರಕೂಡದು. ಅದು ವಿಭಕ್ತವಾಗದಂತೆ ನೋಡಿಕೊಳ್ಳಬೇಕು. ಇದು ಗೃಹ್ಯ, ಧರ್ಮಸೂಕ್ಷ್ಮದ ವಿಚಾರ. ರಾಮಾಯಣದ ಎಷ್ಟೋ ಪ್ರಸಂಗಗಳು 'ಗೃಹ್ಯಸೂತ್ರ'ಕ್ಕೆ ಉದಾಹರಣೆಗಳಾಗಿ ನಿಲ್ಲುತ್ತವೆ. ಮಹಾಭಾರತದಲ್ಲಿ ಹತ್ತಾರು ಧರ್ಮಸೂಕ್ಷ್ಮಗಳು ಕಂಡುಬರುತ್ತವೆ. 'ಧರ್ಮಸೂತ್ರ'ದ ಮೂಲಕ ಮಹಾಭಾರತವನ್ನು ಹಿಂದಿನವರು ನೋಡಿದ್ದಾರೆ; ಇಂದಿನವರೂ ಕಾಣುತ್ತಿದ್ದಾರೆ. ಕುಮಾರವ್ಯಾಸ ಭಾರತದ ಅನೇಕ ಪ್ರಸಂಗಗಳು 'ಧರ್ಮಸೂತ್ರ'ದ ಸೂಕ್ಷ್ಮಾಂಶಗಳನ್ನು ಪ್ರತಿನಿಧಿಸುತ್ತವೆ.

ಇಲ್ಲಿ ಬರುವ ವಿವರಗಳೆಲ್ಲವೂ ಕಲ್ಪಸೂತ್ರಗಳ ಪ್ರಪಂಚವೇ ಆಗಿದೆ. ಸಂಸ್ಕಾರಗಳಲ್ಲಿ ಮನಃಸಂಸ್ಕಾರವೂ ಉಂಟು; ದೇಹ ಸಂಸ್ಕಾರವೂ ಉಂಟು. ದೇಹಶುದ್ಧಿ ಎಷ್ಟು ಮುಖ್ಯವೋ ಅದಕ್ಕಿಂತ ಮನಶ್ಶುದ್ಧಿ ಇನ್ನೂ ಮುಖ್ಯವಾದುದು. ಕೇವಲ ದೇಹಶುದ್ಧಿಯ ಕಡೆ ಗಮನ ಕೊಟ್ಟರೆ, ಮನಃಶುದ್ಧಿಯು ಹಿಂದಕ್ಕೆ ಸರಿಯುತ್ತದೆ. ಸಂಸ್ಕಾರಕ್ಕೆ ದೇಹ–ಮನಸ್ಸುಗಳ ತೋಲನ ತುಂಬಾ ಅಗತ್ಯ. ಹೀಗಾಗಿ, ಗೃಹ್ಯ, ಧರ್ಮ, ಶ್ರೌತ ಮತ್ತು ಶುಲ್ಬಸೂತ್ರಗಳ ವಿಷಯವೇ ಮುಂದೆ 'ಸ್ಮೃತಿ' ಗ್ರಂಥಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಸ್ಮೃತಿಗಳಿಗೆ ಬಂದ ವ್ಯಾಖ್ಯಾನಗಳಲ್ಲಿಯೂ ಮತ್ತಷ್ಟು ವಿಸ್ತೃತವಾಗಿ ಈ ವಿಚಾರಗಳೆಲ್ಲವೂ ತೋರಿಕೊಳ್ಳುತ್ತದೆ. ಈ ಎಲ್ಲವು ಸಂಸ್ಕಾರಕ್ಕೆ ಸಂಬಂಧಿಸಿದ ವಾಙ್ಮಯ ಪ್ರಪಂಚವೇ ಸರಿ. ಇದು ಮುಂದೆ ಸಮಷ್ಟಿರೂಪದಲ್ಲಿ ಕಾಲಾನುಕಾಲಕ್ಕೆ 'ಧರ್ಮಶಾಸ್ತ್ರ'ವಾಗಿ ಪರಿಣಮಿಸುವುದನ್ನು ಕಾಣಬಹುದು.

■ **ಪುರಂಜೀವಿ**

## ಮಾತೇ ಮುತ್ತು

- ಇತಿಹಾಸವು ಕೆಲವು ಪ್ರಾಕೃತಿಕ ಘಟನೆಗಳ ಕಾಲಾನುಕ್ರಮದಲ್ಲಿ ಜೋಡಿಸಿರುವ ಒಂದು ವ್ಯವಸ್ಥಿತ ಕಥನವಾಗಿದೆ.
  —ಅರಿಸ್ಟಾಟಲ್
- ಪ್ರಪಂಚದ ತುಂಬ ಎಷ್ಟೊಂದಿದೆ. ನಾವೆಲ್ಲರೂ ಮಹಾರಾಜರಂತೆ ಸುಖವಾಗಿರಬೇಕು.
  —ಆರ್.ಎಲ್. ಸ್ಟೀವನ್‌ಸನ್
- ಜೀವನದ ವಿಷಯವೇ ತಿಳಿಯದಿರುವಾಗ ಸಾವಿನ ವಿಷಯವನ್ನು ಏಕೆ ಆಲೋಚಿಸುವಿರಿ?
  —ಕನ್‌ಫ್ಯೂಶಿಯಸ್
- ಯಾವಾಗಲೂ ಉದಾರವಾಗಿ ದಾನ ಮಾಡು. ಪ್ರತಿಯಾಗಿ ಏನನ್ನೂ ಆಶಿಸಬೇಡ. ಆಗ ನಿನಗೆ ಪ್ರತಿಫಲವು ಹೆಚ್ಚಾಗಿ ಬರುವುದು.
  —ಏಸು ಕ್ರಿಸ್ತ
- ನೀವು ಏನನ್ನು ಸಾಧಿಸಬೇಕೆಂದು ಬಯಸುತ್ತೀರೋ ಅದಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡಿ, ಅದರ ಪ್ರತಿಫಲವನ್ನು ಬೇಗನೆ ಪಡೆಯುತ್ತೀರಿ.
  —ಅಲೆಗ್ಸಾಂಡರ್
- ಬಡವರು ಹಸಿದಿರುವುದು ಅಕ್ಕರೆಗಾಗಿ. ರೊಟ್ಟಿಗಾಗಿ ಅಲ್ಲ.
  —ಮದರ್ ತೆರೇಸಾ
- ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇಬೇಕೆಂದಿಲ್ಲ. ಆದರೆ ನಂಬಿಕೆ ಇದ್ದಲ್ಲಿ ಪ್ರೀತಿ ಇದ್ದೇ ಇರುವುದು.
  —ಸಂತ ಕಬೀರ
- ಕಷ್ಟವನ್ನು ಅನುಭವಿಸಿದ ಮೇಲೆ ದೊರೆತ ಸುಖವು ಕತ್ತಲಿನಲ್ಲಿ ದೀಪವನ್ನು ಕಂಡಂತೆ.
  —ಭಾಸ